# ಮುಳಬಾಗಿಲಿನ ಜನಪದ ಕಲೆ

ಸಿ. ನಾಗರಾಜ

ಸಹಾಯಕ ಪ್ರಾಧ್ಯಾಕರು, ಕನ್ನಡ ವಿಭಾಗ, ರೇವಾ ವಿಶ್ವವಿದ್ಯಾಲಯ, ಬೆಂಗಳೂರು.

Received: 15/09/2024 ; Acepted: 02/10/2024 ; Published: 05/11/2024

DOI: https://doi.org/10.5281/zenodo.14035158

## ABSTRACT:

ಜನಪದ ಕಲಾವಿದರು, ಗಾಯಕರು, ಕೇಳಿಕೆಯವರು, ಪಂಡರಿ ಭಜನೆಯವರು, ಗಾರುಡಿಗರು, ಗೊರವರು, ದೊಂಬಿದಾಸರು, ಬುರ್ರಕಥೆಯವರು, ಕರಗ ಸಂಪ್ರದಾಯದವರು, ತೊಗಲುಗೊಂಬೆಯಾಟದವರು, ಹಲಗೆ ಮೇಳದವರು, ಚೌಡಿಕೆ ಮೇಳದವರು, ಕೋಲಾಟದವರು ಹೀಗೆ ಹತ್ತು ಹಲವು ಕಲೆಗಳು ಕೋಲಾರ ಜಿಲ್ಲೆಯಾದ್ಯಂತ ಇರುವುದನ್ನು ಕಾಣಬಹುದು. ಒಂದೆರಡು ಕಲೆಗಳನ್ನು ಹೊರತು ಪಡಿಸಿ ಉಳಿದೆಲ್ಲವು ತಾಲೂಕಿನಲ್ಲಿ ಇಂದಿಗೂ ಅಸ್ಥಿತ್ವದಲ್ಲಿವೆ. ಈ ಹಿನ್ನೆಲೆಯಲ್ಲಿ ಮುಳಬಾಗಿಲು ತಾಲ್ಲೂಕಿನ ಜನಪದ ಸಂಸ್ಕೃತಿಯು ಪ್ರಮುಖವಾಗಿದೆ. ಸುಮಾರು 345 ಹಳ್ಳಿಗಳಿಂದ ಕೂಡಿರುವುದರಿಂದ, ಈ ಭಾಗದ ಜನಪದ ಸಂಸ್ಕೃತಿಯ ಜೊತೆಗೆ ಜನಪದ ಕಲೆ, ಜನಪದ ಕ್ರೀಡೆ, ಜನಪದ ಆಚರಣೆಗಳು, ವೈದ್ಯಪದ್ಧತಿ ಮೊದಲಾದವುಗಳನ್ನು ಅವಲೋಕಿಸುವುದು ಈ ಲೇಖನದ ಉದ್ದೇಶವಾಗಿದೆ.

## KEYWORDS:

ಅಲಂಕಾರ, ಕೇಳಿಕೆ, ಪಂಡರಿ ಭಜನೆ, ಜಂಗಾಲ ಪದ, ಯಾಲು ಪದ, ಸೀಬೆ, ಬೈನೆ, ಜಡೆಕೋಲು, ಗೊಬ್ಬಿಯಾಳ್ಳು.

ಮುಳಬಾಗಿಲು ತಾಲ್ಲೂಕು 'ಜನಪದ ಸಂಪ್ರದಾಯಗಳ ತವರೂರು' ಎಂಬುದಕ್ಕೆ ಪಕ್ಕಾಗಿರುವಂತೆ 'ಜನಪದ ಸಂಸ್ಕೃತಿ'ಗೂ ಪಕ್ಕಾಗಿದೆ ಎನ್ನಬಹುದು. ಇಲ್ಲಿ ವಿಭಿನ್ನ ಭಾಷೆ ಬಳಸುವ, ವಿವಿಧ ಧರ್ಮಗಳ ಸಮುದಾಯದಿಂದ ಕೂಡಿದ ಪ್ರದೇಶ ವಾಗಿರುವುದರಿಂದ ಇಲ್ಲಿ ವೈವಿದ್ಯಮಯವಾದ ಬಹುಮುಖೀ ಸಂಸ್ಕೃತಿಯನ್ನು ಕಾಣಬಹುದು. ನಾಗರಿಕತೆ ಅವರ ಮೇಲೆ ದಟ್ಟವಾಗಿ ಪ್ರಭಾವ ಬೀರಿದೆಯಾದರೂ ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ ಜನಸಾಮಾನ್ಯರು ತಮ್ಮದೇ ಆದ ವೈಶಿಷ್ಟ್ಯಗಳನ್ನು ಉಳಿಸಿ ಬೆಳೆಸಿಕೊಂಡು ಮುಂದುವರಿಯುತ್ತಿರುವುದು ವೇದ್ಯವಾಗುತ್ತದೆ.

"ಉಳಿದ ತಾಲ್ಲೂಕುಗಳಂತೆ ಮುಳಬಾಗಿಲು ಜನಪದ ಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆಯನ್ನು ನೀಡಿದೆ. ಕೇಳಿಕೆ, ಬುರ್ರಕಥಾ, ಕೋಲಾಟ, ಕಣಿ, ತೊಗಲು ಗೊಂಬೆಯಾಟ, ಕರಡಿ ಕುಣಿತ, ಗೊರವಯ್ಯನ ವೇಷ, ಕೊಂಡರಾಜರಶಾಸ್ತ್ರ, ಶಕುನ,

ಭವಿಷ್ಯದ ಪದ, ಜೋಗಿ ಜಂಗಾಲರಪದ, ಯಾಲುಪದ, ಹಲಗೆ, ತಮಟೆ ಮುಂತಾದ ಪ್ರಕಾರಗಳಲ್ಲದೇ, ಗಾರುಡಿಗೊಂಬೆಗಳಂತಹ ಮನರಂಜನೆಯ ಪ್ರಕಾರಗಳನ್ನು ಕಾಣಬಹುದು. ಅಲ್ಲದೇ ಕೋಲಾಟದ ಹಾಡುಗಳಿವೆ. ಸಂಕ್ರಾಂತಿಯಲ್ಲಿ ಗೊಬ್ಬಿಳ್ಳು ಹಾಡುಗಳು ಹಾಡುತ್ತಾರೆ. ಇವುಗಳಲ್ಲಿ ಸ್ತ್ರೀಪರವಾದ ದೃಷ್ಟಿಕೋನ ಇದೆ.”[1]

## 1. ಕೋಲಾಟ

ಕೋಲಾಟ ಜನಪದ ಮನರಂಜನೆಯ ಕಲೆಗಳಲ್ಲೊಂದು. ಕೋಲುಗಳ ಮೂಲಕ ಆಟ ಸಾಗುವುದರಿಂದ ಇದಕ್ಕೆ ಕೋಲಾಟವೆಂಬ ಹೆಸರು ಬಂದಿದೆ. ಹಾಡು ಮತ್ತು ನೃತ್ಯಗಳ ಸಮ್ಮಿಲನವಾಗಿರುವ ಈ ಕಲೆ ಗ್ರಾಮೀಣರಿಗೆ ವಿಶೇಷ ಮನರಂಜನೆಯಾಗಿದೆ. ಈ ಆಟವನ್ನು ಹೆಚ್ಚಾಗಿ ಸುಗ್ಗಿಯ ಕಾಲದಲ್ಲಿ, ಹಬ್ಬಹರಿದಿನಗಳಲ್ಲಿ ಪ್ರಚುರಪಡಿಸುತ್ತಾರೆ. ಕೋಲಾಟದಲ್ಲಿ ಸುಮಾರು ಎಂಟರಿಂದ ಇಪ್ಪತ್ನಾಲ್ಕು ಜನರಿರುತ್ತಾರೆ. ಕೋಲಾಟದಲ್ಲಿ ಭಾಗವಹಿಸುವವರಿಗೆ ವಯೋಭೇದವಿಲ್ಲ. ಚಿಕ್ಕವರು ದೊಡ್ಡವರು ಎಲ್ಲರೂ ಭಾಗವಹಿಸುತ್ತಾರೆ. ಇಲ್ಲಿ ಕೋಲುಗಳು ಪ್ರಮುಖ ಸಾಧನಗಳು. ಇವುಗಳನ್ನು ಸಾಮಾನ್ಯವಾಗಿ ಸೀಬೆ, ಬೈನೆ, ಕಾರೆ, ಜಾಲಿ, ನೀಲಗಿರಿ ಮುಂತಾದ ಮರಗಳಿಂದ ಮಾಡಿರುತ್ತಾರೆ.

ಇದು ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಈಗಲು ಚಾಲ್ತಿಯಲ್ಲಿರುವ ಒಂದು ಕಲೆಯಾಗಿದೆ. ವಿ. ಕುರುಬರಹಳ್ಳಿ, ಕಾಡೇನಹಳ್ಳಿ, ಪೆತ್ತಾಂಡ್ಲಹಳ್ಳಿ ಇನ್ನು ಮುಂತಾದ ಹಳ್ಳಿಗಳಲ್ಲಿ ಪ್ರತಿವರ್ಷವು ದೀಪಾವಳಿ ಅನಂತರ ಸಂಕ್ರಾಂತಿ ಹಬ್ಬದ ನಡುವೆ ಗೌರಮ್ಮನನ್ನ ಕೂರಿಸಿ ಒಂದು ತಿಂಗಳ ಕಾಲ ದಿನನಿತ್ಯ ಕೋಲಾಟದ ಹಾಡುಗಳನ್ನು ಹಾಡುತ್ತಾರೆ. ಜನಪದ ಗೀತೆಗಳನ್ನು ಗೌರಮ್ಮನಿಗೆ ಮಹಿಳೆಯರು ಹಾಡುತ್ತಾರೆ. ಹಿಂದೆ ಗಂಡಸರು ಮಾತ್ರ ಕೋಲಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ಪ್ರಸ್ತುತ ಹೆಂಗಸರು ಸ್ವಇಚ್ಛೆಯಿಂದ ಭಾಗವಹಿಸುತ್ತಾರೆ. ತಾಲೂಕಿನಲ್ಲಿ ಕೋಲಾಟದ ವಿವಿಧ ತಂಡಗಳಿವೆ. ಇವರು ಬೇರೆ ಬೇರೆ ಊರುಗಳಲ್ಲಿ ಪ್ರದರ್ಶನ ನೀಡಿ. ಸಂಭಾವನೆ ಪಡೆಯುತ್ತಾರೆ. ಕೋಲಾಟವನ್ನು ಬೇರೆ ಬೇರೆ ಹಳ್ಳಿಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರದರ್ಶಿಸುತ್ತಾರೆ. ಸಂಕ್ರಾಂತಿ, ಯುಗಾದಿ, ಬಿಡುವಿನ ವೇಳೆ, ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಆಚರಣೆಯಲ್ಲಿದೆ.

“ಪೆತ್ತಾಂಡ್ಲಹಳ್ಳಿ ಗ್ರಾಮದಲ್ಲಿ ಪೆದ್ದಕೃಷ್ಣಪ್ಪರವರ ಮಾರ್ಗದರ್ಶನದಲ್ಲಿ ಪ್ರತಿದಿನ ರಾತ್ರಿ 7 ಗಂಟೆಗೆ ಪ್ರಾರಂಭಿಸಿದರೆ 12 ಗಂಟೆವರೆಗೂ ಪ್ರದರ್ಶಿಸುತ್ತಾರೆ. ವಿಭಿನ್ನ ರೀತಿಯ ಪ್ರದರ್ಶನ ನಡೆಯುತ್ತದೆ. ಕೋಲಾಟ ನೃತ್ಯ ಮಾಡುವವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತಾರೆ. ಕೆಲವು ತಂಡದವರು ಸಮವಸ್ತ್ರ ಧರಿಸುವರು.

ಕೋಲಾಟದಲ್ಲಿ ಗೆಜ್ಜೆ, ತಾಳ ಮತ್ತು ದಮ್ಮಡಿಗಳನ್ನು ಬಳಸಲಾಗುತ್ತದೆ.

ಇವುಗಳನ್ನು ನುಡಿಸಲು ಪ್ರತ್ಯೇಕ ಕಲಾವಿದರು ಇರುತ್ತಾರೆ. ಕಲಾವಿದರು ಕಾಲಿಗೆ ಗೆಜ್ಜೆ ಕಟ್ಟಿಕೊಳ್ಳುವುದು ಸಾಮಾನ್ಯ. ಇದರಿಂದ ಅವರ ಕುಣಿತಕ್ಕೆ ಆವೇಶ, ಹುಮ್ಮಸ್ಸು ಹೆಚ್ಚಾಗುತ್ತದೆ. ತಾಳ ಹಾಕುವ ಮತ್ತು ದಮ್ಮಡಿ ಬಡಿಯುವ ಕಾರ್ಯ ಕುಣಿತವನ್ನು ಪುಷ್ಟಿಗೊಳಿಸುತ್ತದೆ.

ಜಡೆಕೋಲು ಎಂಬುದು ಕೋಲಾಟದ ಒಂದು ವಿಶಿಷ್ಟ ಬಗೆ. ಇದನ್ನು ತಾಲ್ಲೂಕಿನಲ್ಲಿ ಆಗಾಗ ಪ್ರದರ್ಶಿಸುವುದುಂಟು."[2]

ರಚನೆಯ ದೃಷ್ಟಿಯಿಂದ ಕೋಲಾಟದ ಪದಗಳನ್ನು ಭಾವಗೀತಾತ್ಮಕ ಮತ್ತು ಕಥಾತ್ಮಕಗಳೆಂದು ವಿಭಾಗ ಮಾಡಿಕೊಳ್ಳಲು ಸಾಧ್ಯವಿದೆ. ಕೋಲಾಟಕ್ಕಾಗಿ ರಚಿತವಾದ ಗೀತೆಗಳು ಚಿಕ್ಕದಾಗಿರುತ್ತವೆ. ಒಂದು ವೇಳೆ ದೀರ್ಘವಾಗಿರುವುದಾದರೆ ಪದ ಪಲ್ಲವಿ ಪುನರಾವರ್ತನೆಯಾಗುತ್ತವೆ.

## 2. ಕೋಲೆಬಸವ

"ಈ ಆಟವನ್ನು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿ ಕಾಣಬಹುದು. ಬಸವನನ್ನು ರಾಮನೆಂತಲೂ, ಹಸುವನ್ನು ಸೀತೆಯಂತೆಲೂ, ಒಂದು ಪುಟ್ಟಕರುವನ್ನು ಲಕ್ಷ್ಮಣನೆಂತಲೂ ಕರೆಯುತ್ತಾರೆ. ಒಂಟಿ ಬಸವ ಕೆಲವೊಮ್ಮೆ ಜೊತೆಗೊಂಡು ಕರುವಿನ ಜೊತೆಗೆ ಕರೆದುಕೊಂಡು ಮನೆ ಮನೆಗೆ ಹೋಗಿ ಆಟವಾಡಿಸುವುದು ಒಂದು ರೀತಿ. ಎರಡು ಕವಲೆತ್ತುಗಳಲ್ಲಿ ಒಂದು ರಾಮ ಮತ್ತೊಂದು ಲಕ್ಷ್ಮಣನಾದರೆ ಆಕಳು ಸೀತೆ, ಕರು ವಿದೂಷಕ ಇವುಗಳಿಂದ ಊರಿನ ಮಧ್ಯ ಬಯಲಿನಲ್ಲಿ ರಾಮಾಯಣ ಕಥೆ ಹೇಳುತ್ತ ಆಟ ಪ್ರಾರಂಭಿಸುತ್ತಾರೆ."[3]

ಕೋಲೆಬಸವನನ್ನು ಆಡಿಸುವವನನ್ನು ಸೂತ್ರದಾರ ಎನ್ನುವರು. ಕೋಲೆಬಸವನ ಜೋಡಿ ನೋಡಲು ಬಹಳ ಸುಂದರ. ಅವುಗಳ ದೇಹ ಮತ್ತು ಭುಜಗಳನ್ನು ಎತ್ತರವಾಗಿ ಕಾಣುವಂತೆ ಬಣ್ಣಬಣ್ಣದ ಬಟ್ಟೆಗಳಿಂದ ಅಲಂಕರಿಸಿರುತ್ತಾರೆ. ಕೊಂಬುಗಳು ಪುಟ್ಟದಾಗಿದ್ದರೆ ಉದ್ದವಾಗಿ ತೋರುವಂತೆ ಬಟ್ಟೆ ಸುತ್ತಿ ಸಿಂಗರಿಸಿರುತ್ತಾರೆ. ತುದಿಯಲ್ಲಿ ಬಣ್ಣದ ಕುಚ್ಚುಗಳನ್ನು ಹಿತ್ತಾಳೆಯ ಹಣಸುಗಳನ್ನು ಜೋಡಿಸಲಾಗುತ್ತದೆ. ಕಾಲುಗಳಿಗೆ ಗಗ್ಗರ, ಹಣೆಯ ಮೇಲೆ ಹಿತ್ತಾಳೆಯಿಂದ ಮಾಡಿದ ಶ್ರೀರಾಮನ ಇಲ್ಲವೆ ಆಂಜನೇಯನ ಲಾಂಛನಗಳನ್ನು ಅಳವಡಿಸುತ್ತಾರೆ.

ಈ ಆಟದಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಅವುಗಳ ಸಿಂಗಾರ, ನಟನೆ, ಆಟಗಾರರ ಮಾತುಕತೆ, ಆಟದ ವಸ್ತು ಸೀತಾರಾಮ ಕಲ್ಯಾಣ. ಸಾಮಾನ್ಯವಾಗಿ ಕೋಲೆಬಸವನ ಆಟ ಆಡಿಸುವವರು ಅಲೆಮಾರಿಗಳಾಗಿರುತ್ತಾರೆ. ಕಡುಬಡವರು ವಂಶಪಾರಂಪರ್ಯವಾಗಿ ಈ ಕಸಬನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

ಒಂದು ಕಡೆ ಪೌರಾಣಿಕ ಪ್ರಜ್ಞೆಯನ್ನು ಎಚ್ಚರಿಸುತ್ತ ಪ್ರಸಾರ ಮಾಡುತ್ತ ಆದರ್ಶವನ್ನು ಹುಟ್ಟುಹಾಕುತ್ತಾರೆ. ಇಂತಹ ಪ್ರದರ್ಶನ ನೀಡಿ ಜನರನ್ನು ಸಂತೋಷಗೊಳಿಸುತ್ತಾರೆ. ಮನೆ ಮನೆಗೆ ಹೋಗಿ ದವಸ-ದಾನ್ಯ, ಬಟ್ಟೆಯನ್ನು ಬೇಡುವುದಷ್ಟೆ ಅಲ್ಲದೇ ಜನ ಸೇರುವ ಸಂತೆ, ಜಾತ್ರೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ.

ತಾಲ್ಲೂಕಿನಲ್ಲಿ ಬೈರಕೂರು, ಹೆಬ್ಬಣಿ, ವಡ್ಡಹಳ್ಳಿ, ನಂಗಲಿ, ಮುಳಬಾಗಿಲು ಇತ್ಯಾದಿ ಸ್ಥಳಗಳಲ್ಲಿ ಬಿಡಾರಹೂಡಿರುತ್ತಾರೆ. ಮತ್ತೊಂದು ಮುಖ್ಯವಿಷಯವೆಂದರೆ ತಾಲ್ಲೂಕಿನ ಕುರುಬ ಜನಾಂಗದವರು ಹನ್ನೆರಡು ವರುಷಕ್ಕೆ ಒಮ್ಮೆ ನಡೆಯುವ ಬೀರೇಶ್ವರ ದ್ಯಾವರ ಮಹೋತ್ಸಕ್ಕೆ ಸಂಕೇತವಾಗಿ ಬಸವನನ್ನು ಸ್ವೆಚ್ಛೆಯಿಂದ ಸಾಕುತ್ತಾರೆ.

**3. ಪಂಡರಿ ಭಜನೆ**

ಪಂಡರಾಪುರದ ವಿಠಲನನ್ನು ಕುರಿತ ನಾಮ ಸಂಕೀರ್ತನೆಯೇ ಪಂಡರಿ ಭಜನೆ. ಇದೊಂದು ಆರಾಧನಾ ರೂಪವಾದ ಧಾರ್ಮಿಕ ಕಲೆ. ಸಾಮೂಹಿಕ ಗೀತ ಮತ್ತು ನೃತ್ಯ ಸಂಪ್ರದಾಯ. ವಯೋಮಿತಿಯಿಲ್ಲದೆ ಜಾತಿ ಭೇದವಿಲ್ಲದೆ ಎಲ್ಲ ಜನಪದರು ಭಾಗವಹಿಸುವ ಕಲೆ. ಪಾಂಡುರಂಗನನ್ನು ಭಜಿಸುತ್ತಾ ಸುಮಾರು 20–30 ಮಂದಿ ಕಲಾವಿದರು ವೃತ್ತಾಕಾರವಾಗಿ ಮತ್ತು ಪರಸ್ಪರ ಅಭಿಮುಖವಾಗಿ ನಿಂತು ಭಕ್ತಿ ಪಾರವಶತೆಯಿಂದ ಕುಣಿಯುವ ಕಲೆ.

“ಈ ಕಲೆಯ ಉದ್ದೇಶ ಭಗವಂತನ ಆರಾಧನೆ ಮತ್ತು ಭಕ್ತಿಯ ಪ್ರಚಾರವಾದರೂ ಪರೋಕ್ಷವಾಗಿ ಜನಪದರಲ್ಲಿ ಸಮೂಹ ಜೀವನಕ್ಕೆ ಒತ್ತನ್ನುಕೊಡುತ್ತದೆ. ಜನಪದರಲ್ಲಿ ಐಕ್ಯತೆಯನ್ನು ಉಂಟುಮಾಡಲು ಇಂತಹ ಕಲೆ ನೆರವಾಗುತ್ತದೆ. ಜನಪದರಿಗೆ ನೈತಿಕ ಜೀವನದ ಸಹಜ ತಿಳುವಳಿಕೆ ಮೂಡಿಸುತ್ತದೆ. ಮನರಂಜನೆ ನೀಡುತ್ತದೆ. ಪಂಡರಿ ಭಜನೆಯ ಇಡೀ ಹಾಡುಗಳಲ್ಲಿ ಪರಮಾತ್ಮನನ್ನು ಕುರಿತ ಸ್ತುತಿಗಳು ಅವನ ಲೀಲಾವಿನೋದಗಳು ನಡೆಸಿದ ಪವಾಡಗಳೇ ಚಿತ್ರಿತಗೊಂಡಿವೆ. ಅಲ್ಲದೇ ಭಕ್ತರನ್ನು ಕುರಿತು ಪಂಡರಾಪುರಕ್ಕೆ ಹೋಗೋ ಪಂಡರಿನಾಥ ಸನ್ನಿಧಿ ನೋಡೋಣ ಚಂದ್ರಭಾಗ ನದಿಯಲ್ಲಿ ಸ್ನಾನ ಮಾಡೋಣ ಎಂಬ ವಿಷಯಗಳು ಬರುತ್ತವೆ.”[4]

ಈ ಕಲೆಯ ಮೂಲ ಮಹಾರಾಷ್ಟ್ರವೆಂದು ಜನಪದರು ಹೇಳುತ್ತಾರೆ. ಕೋಲಾರ ಜಿಲ್ಲೆಯ ಬಹುಭಾಗದಲ್ಲಿ ಈ ಕಲೆ ಪ್ರಚಲಿತದಲ್ಲಿದೆ. ಒಟ್ಟಿನಲ್ಲಿ ಇದೊಂದು ಜನಪ್ರಿಯ ಜನಪದ ಕಲೆಯಾಗಿದ್ದು ಜಾತ್ರೆ, ಉತ್ಸವದ ಸಂದರ್ಭದಲ್ಲಿ ಪಂಡರಿ ಭಜನೆ ಕಂಡುಬರುತ್ತದೆ. ತಾಲ್ಲೂಕಿನಲ್ಲಿ 150ಕ್ಕೂ ಹೆಚ್ಚು ಭಜನಾ ತಂಡಗಳಿವೆ ಎಂದು ಅಂದಾಜಿಸಬಹುದು. ಸಿ.ಹೊಸಹಳ್ಳಿ, ಪೆರಮಾಕನಹಳ್ಳಿ, ಕೋಡಿಹಳ್ಳಿ, ಗೊಲ್ಲಹಳ್ಳಿ, ಮುಳಬಾಗಿಲು, ಬೈರಕೂರು, ಬೇವಹಳ್ಳಿಗಳಲ್ಲಿ ತಂಡಗಳಿವೆ.

**4. ಹಾವಾಡಿಗರು**

ತಾಲೂಕಿನಲ್ಲಿರುವ ಹಾವಾಡಿಗರು ಭಿಕ್ಷೆ ಬೇಡುವುದರ ಜೊತೆಗೆ ಹಲವು ಸಣ್ಣ, ಪುಟ್ಟ ವ್ಯಾಪಾರ, ಕೂಲಿ ಕೆಲಸ ಮಾಡಿಕೊಂಡು, ಸಾರ್ವಜನಿಕ ಸ್ಥಳಗಳಲ್ಲಿ ಸಿಗುವ ಹಳೆ ಪ್ಲಾಸ್ಟಿಕ್ ಸಾಮಾನುಗಳನ್ನು ಸಂಗ್ರಹಿಸಿಕೊಂಡು ಮಾರಾಟ ಮಾಡಿಯು ಜೀವನ ನಡೆಸುತ್ತಾರೆ. ಇವರ ಮತ್ತೊಂದು ಪ್ರವೃತ್ತಿಯೆಂದರೆ ಯಾವುದೇ ಮನೆಯೊಳಗೆ ಹಾವು ನುಗ್ಗಿದರೆ ಕರೆದ ಕೂಡಲೇ ಹೋಗಿ ಹಾವನ್ನು ಹಿಡಿದು ಅದೇ ಹಾವನ್ನು ಆಟಕ್ಕೆ ಬಳಸುವರು.

ಇವರ ಊಟೋಪಚಾರಗಳು ಹೆಚ್ಚಾಗಿ ಭಿಕ್ಷೆಯಿಂದ ಬಂದದ್ದೇ ಆಗಿರುತ್ತವೆ. ಹಿರಿಯರು ದಿನವಿಡೀ ಕೆಲಸಕ್ಕೆ ಹೋದರೆ ಗುಡಿಸಿಲಿನಲ್ಲಿರುವ ಮಕ್ಕಳು ಮನೆ ಮನೆಗೂ ಹೋಗಿ ಭಿಕ್ಷೆಬೇಡಿ ಅನ್ನ, ಸಾರು ಇತ್ಯಾದಿಯನ್ನು ತಂದಿಡುತ್ತಾರೆ. ಇವರಲ್ಲಿ ಕುಡಿತದ (ಮದ್ಯಪಾನ) ಚಟ ಹೆಚ್ಚಾಗಿರುತ್ತದೆ. ಹೆಂಗಸರು ಗಂಡಸರು ಒಟ್ಟಿಗೆ ಕುಡಿಯುತ್ತಾರೆ. ಈ ಸಮುದಾಯದಲ್ಲಿ ಬಾಲ್ಯವಿವಾಹ ಪದ್ಧತಿ ಹೆಚ್ಚಾಗಿರುವುದನ್ನು ನೋಡಬಹುದು.

**5. ಬುಡುಬುಡುಕೆಯವರು**

“ಇದು ಮರಾಠಿಗರಿಂದ ಬಂದ ಕಲೆಯೆಂದು ಹೇಳುತ್ತಾರೆ. ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಬುಡುಬುಡುಕೆಯವರು ನೂರಾರು ವರ್ಷಗಳಿಂದಲೂ ಓಡಾಡುತ್ತಿದ್ದಾರೆ. ಇವರನ್ನು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ನರಸಣ್ಣ ಎಂದು ಕರೆಯುತ್ತಾರೆ. ಬುಡುಬುಡುಕೆ ಎಂಬ ಚರ್ಮವಾದ್ಯದಿಂದ ಇವರಿಗೆ ಬುಡುಬುಡುಕೆಯವರೆಂದು ಹೆಸರು ಬಂದಿದೆ. ಬುಡುಕ್ ಬುಡುಕ್ ಎಂಬ ಮೋಹಕ ಶಬ್ದವನ್ನು ಕೊಡುವ ಇವರ ವಾದ್ಯ ಈ ಜನರನ್ನು ಕುತೂಹಲಕಾರಿ ವ್ಯಕ್ತಿಗಳನ್ನಾಗಿ ಮಾಡುತ್ತದೆ.

ಬೆಳಿಗ್ಗೆ ಮನೆ ಮನೆಗೆ ಬಂದು ಶಕುನ ಹೇಳುವ ಬುಡುಬುಡುಕೆಯವರನ್ನು ಕುರಿತು ಅನೇಕ ದಂತಕಥೆಗಳಿವೆ. ಶ್ರೀಕೃಷ್ಣ ನುಡಿಸಿದಂತೆ ನುಡಿಯುತ್ತೇವೆಂದು ಹೇಳುವ ಬುಡುಬುಡುಕೆಯವರು ಭವಿಷ್ಯ ಹೇಳುವರು. ಇವರು ಸಾಮಾನ್ಯವಾಗಿ ಬಟ್ಟೆ ಕೊಡಬೇಕೆಂದು ಕಾಡುತ್ತಿರುತ್ತಾರೆ. ಒಂದರ ಮೇಲೊಂದರಂತೆ ಹೆಗಲ ಮೇಲೆ ಬಟ್ಟೆಗಳನ್ನು ಹಾಕಿಕೊಂಡು ಕೆಲವು ಸಲ ಈ ಬುಡುಬುಡುಕೆಯವರು ವಿಚಿತ್ರವಾಗಿ ಕಾಣುತ್ತಿರುತ್ತಾರೆ.

ಇವರ ಹೇಳಿಕೆಯನ್ನು ‘ಹಾಲಕ್ಕಿ ಶಕುನ’ ಎಂದು ಹೇಳುವುದು ರೂಢಿ. ಸ್ಮಶಾಸನದಲ್ಲಿ ಹಾಲಕ್ಕಿ ನುಡಿಯುವುದನ್ನು ಕೇಳಿಕೊಂಡು ಊರ ಬೀದಿಗಳಲ್ಲಿ ಅದನ್ನು

ಇವನು ಹೇಳುತ್ತಾನೆಂದು ಜನರು ನಂಬುತ್ತಾರೆ. ಹಾಲಕ್ಕಿ ಅಥವಾ ಶಕುನದ ಹಕ್ಕಿ ಹೇಳುವುದು ಬುಡುಬುಡಿಕೆಯವರಿಗೆ ಮಾತ್ರ ಅರ್ಥವಾಗುವುದಂತೆ. ತಾಲೂಕಿನಲ್ಲಿ ಬುಡುಬುಡಿಕೆಯವರು ಕೋಣನಗುಂಟೆ, ಮುಳಬಾಗಿಲು, ಬೈರಕೂರು, ಗುಡಿಪಲ್ಲಿ ಇತ್ಯಾದಿ ಸ್ಥಳಗಳಲ್ಲಿ ಕಂಡುಬರುತ್ತಾರೆ. ಇವರಲ್ಲಿ ಕೆಲವರು ಹರಿಕಥೆಯನ್ನು ಹೇಳುವುದನ್ನು ಗಮನಿಸಬಹುದು.''[5]

**6. ಕೇಳಿಕೆ**

ಇದು ಯಕ್ಷಗಾನ ಬಯಲಾಟ ಪ್ರಕಾರಗಳಲ್ಲಿ ಒಂದು. ಮೂಡಲಪಾಯದ ಅನೇಕ ಲಕ್ಷಣಗಳನ್ನೊಳಗೊಂಡ ಕೇಳಿಕೆಯನ್ನು ಅದರ ಒಂದು ಪ್ರಭೇದವೆಂದು ಗುರುತಿಸಲಾಗಿದೆ.

``ಕೇಳಿಕೆಯ ಮುಖ್ಯ ಪ್ರಸಂಗಗಳೆಂದರೆ ಸಂಪೂರ್ಣರಾಮಾಯಣ, ಲವಕುಶ, ಸೀತಾಸ್ವಯಂವರ, ವಿರಾಟ ಪರ್ವ, ಕರಿಭಂಟನ ಕಥೆ, ಸತ್ಯಹರಿಶ್ಚಂದ್ರ, ಪ್ರಹ್ಲಾದ ಚರಿತ್ರೆ, ಕಂಸಾಸುರಕಥೆ, ತೆಲುಗು-ಸಾಸುಲು ಚಿನ್ನಮ್ಮ ಕಥೆ, ವೀರಬ್ರಹ್ಮಯ್ಯಗಾರಿ ಚರಿತ್ರೆ, ಕುರುಕ್ಷೇತ್ರಂ, ರಾಮಾಯಣಂ ಇತ್ಯಾದಿ.

ಕೇಳಿಕೆ ಒಂದು ಸಮ್ಮಿಶ್ರ ಕಲೆಯೇ ಹೊರತು ಕೇವಲ ಗಾನ ಶೈಲಿ ಅಥವಾ ಲಾವಣಿ ಅಲ್ಲ. ಸಂಗೀತ, ಸಾಹಿತ್ಯ, ಕುಣಿತ ಮತ್ತು ಅಭಿನಯ ಈ ಕಲೆಯಲ್ಲಿ ಸೇರಿಕೊಂಡಿವೆ. ಕೇಳಿಕೆ ಇಡೀ ರಾತ್ರಿ ನಡೆಯುವ ಸಾಂಪ್ರದಾಯಿಕ ಜನಪದ ಕಲೆ. ಕೇಳಿಕೆಯ ಪ್ರಸಂಗ ಸಾಹಿತ್ಯದ ಗದ್ಯ ಪದ್ಯಗಳೆರಡೂ ನಿರ್ಮಿತವಾಗಿರುತ್ತವೆ. ಮಧ್ಯ-ಮಧ್ಯದಲ್ಲಿ ಕೆಲವು ಸಂಭಾಷಣೆಗಳನ್ನು ಮಾತ್ರ ಪಾತ್ರಧಾರಿಗಳು ವೈವಿಧ್ಯ ಪೂರ್ಣವಾಗಿ ಕಂಗೊಳಿಸುವಂತೆ ಮಾಡುತ್ತಾರೆ. ಕಿರೀಟ, ಎದೆಹಾರ ಮತ್ತು ಭುಜಕೀರ್ತಿಗಳನ್ನು ಹಗುರವಾದ ಮರದಿಂದ ತಯಾರು ಮಾಡಿರುತ್ತಾರೆ. ಕೇಳಿಕೆಯ ಮುಖ್ಯ ವಾದ್ಯಗಳು ಮದ್ದಲೆ, ತಾಳ ಮತ್ತು ಮುಖವೀಣೆ.

ತಾಲೂಕಿನಲ್ಲಿ ಕೇಳಿಕೆಯನ್ನು ಸಾಮಾನ್ಯವಾಗಿ, ಹಬ್ಬ, ಹರಿದಿನ, ಜಾತ್ರೆ, ತಿಥಿ, ಸುಗ್ಗಿಕಾಲದಲ್ಲಿ ಪ್ರದರ್ಶಿಸುತ್ತಾರೆ. ಇಲ್ಲಿ ತಾವೇ ಕಲಿತಿರಬಹುದು ಅಥವಾ ಆಂಧ್ರದ ಮದನಪಲ್ಲಿ ಮತ್ತು ಪುಂಗನೂರುಗಳಿಂದ ಕೇಳಿಕೆ ತಂಡಗಳನ್ನು ಕರೆಸುವುದುಂಟು. ತಾಲೂಕಿನ ಹಲವು ಹಳ್ಳಿಗಳಲ್ಲಿ ಕೇಳಿಕೆ ತಂಡಗಳಿವೆ. ಪಾತ್ರಗಳನ್ನು ಹೇಳುವುದಾದರೆ ಸ್ತ್ರೀಪಾತ್ರಗಳನ್ನು ಗಂಡಸರೆ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀಯರು ಸ್ವಇಚ್ಛೆಯಿಂದ ಪಾತ್ರಧಾರಿಗಳಾಗಿ ಭಾಗವಹಿಸುವುದು ಸಂತೋಷದ ವಿಷಯ.''[6]

**7. ಕೀಲು ಕುದುರೆ**

ಒಂದು ಬಗೆಯ ಜನಪದ ನೃತ್ಯ ಸಾಧನ ಹಿಂದಿನಿಂದಲೂ ಜನಪ್ರಿಯತೆ

ಪಡೆದಿದೆ. ಅಶ್ವಾರೂಢರಂತೆ ವೇಷಧರಿಸಿ ಅಂದ ಚೆಂದದ ಉಡುಗೆಗಳನ್ನು ತೊಟ್ಟು ಜನಪದ ವಾದ್ಯಗಳ ತಾಳಕ್ಕೆ ತಕ್ಕಂತೆ ಕುಣಿದು ಕುಪ್ಪಳಿಸುವ ಮೂಕ ನೃತ್ಯ ಬೂರುಗ ಮರ ಅಥವಾ ಬಿದಿರುಗಳಿಂದ ಕುದುರೆಯ ಆಕೃತಿಯನ್ನು ತಯಾರಿಸಿ ಮಧ್ಯದಲ್ಲಿ ಮನುಷ್ಯ ನಿಂತು ಹಾಡುವಂತೆ ವಿನ್ಯಾಸಗೊಳಿಸಲಾಗಿರುತ್ತದೆ. ಅದನ್ನು ಆಕರ್ಷಕ ಬಣ್ಣಗಳಿಂದ, ಚಮಕಿಯಿಂದ ಮತ್ತು ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕರಿಸುವರು. ರಾಜ ಮತ್ತು ರಾಣಿ ವೇಷಧರಿಸಿ ಇಬ್ಬರು ಪಾತ್ರಧಾರಿಗಳು ಈ ಕುದುರೆಯ ಆಕೃತಿಗಳನ್ನು ನಡುವಿಗೆ ಕಟ್ಟಿಕೊಂಡು ಜನಪದ ವಾದ್ಯಗಳ ತಾಳಕ್ಕೆ ತಕ್ಕಂತೆ ಮೂಕ ನರ್ತನ ಮಾಡುವರು. ಕಣ್ಣು, ಕೈ, ದೇಹದ ಆಂಗಿಕ ಅಭಿನಯದ ಮೂಲಕ ನೃತ್ಯ ಮಾಡುತ್ತಾರೆ. ಮಾತಿಗೆ ಇಲ್ಲಿ ಆಸ್ಪದವೇ ಇಲ್ಲ.

ರಾಜರಾಣಿಯರ ಪಾತ್ರಗಳು ಗಂಭೀರ ನರ್ತನ ಮತ್ತು ಅಭಿನಯದ ನಡುವೆ ಹಾಸ್ಯಗಾರನು ಆಗಾಗ ತನ್ನ ಪ್ರದರ್ಶನವನ್ನು ತೋರುತ್ತಾನೆ. ಒಮ್ಮೆ ರಾಜ ರಾಣಿಯರನ್ನು ಪ್ರಸನ್ನಗೊಳಿಸುತ್ತ ಮತ್ತೊಮ್ಮೆ ಅವರನ್ನು ಗೌಪ್ಯಗೊಳಿಸುತ್ತಾ ಜನರನ್ನು ನಕ್ಕುನಲಿಸುವನು. ಇದೊಂದು ಶ್ರೀಮಂತ ಜನಪದ ಕಲೆ. ಮನರಂಜನೆಯೇ ಇದರ ಉದ್ದೇಶ. ಇದನ್ನು ರಾತ್ರಿ ಸಮಯದಲ್ಲಿ ವಿಶೇಷ ಬೆಳಕಿನಲ್ಲಿ ಪ್ರದರ್ಶಿಸುತ್ತಾರೆ. ಸುಮಾರು 3–4 ಘಂಟೆಗಳ ಕಾಲ ಪ್ರದರ್ಶನ ನೀಡಬಲ್ಲರು.

ಈ ಕೀಲು ಕುದುರೆಗಳನ್ನು ಆಡುವ ಜನ ತಾಲುಕಿನಲ್ಲಿ ಕಂಡುಬರುತ್ತಾರೆ. ಮುಷ್ಟೂರು ಮುಳಬಾಗಿಲು, ತಾಯಲೂರುಗಳಲ್ಲಿ ನೆಲಸಿದ್ದಾರೆ. ಇವರನ್ನು ಜಾತ್ರೆ, ಉತ್ಸವ, ಸಮ್ಮೇಳನ, ಪ್ರಮುಖ ದಿನಾಚರಣೆ ಸಂದರ್ಭದಲ್ಲಿ ಕರೆಸುವುದು ಸಾಮಾನ್ಯವಾಗಿದೆ.

**8. ಕರಗ**

**ಕರಗ ಮಹೋತ್ಸವ:** ಕರಗ ಮಹೋತ್ಸವವನ್ನು ದ್ರೌಪದಿ ಧರ್ಮರಾಯ ಕರಗ ಮಹೋತ್ಸವವೆಂದು ಕರೆಯುತ್ತಾರೆ. ಮುಳಬಾಗಿಲಿನಲ್ಲಿ ಈ ಕರಗವನ್ನು ಗಂಗಮ್ಮ ಜಾತ್ರೆ ಸಂದರ್ಭದಲ್ಲಿ ಮಾಡುತ್ತಾರೆ. ಇದರಲ್ಲಿ ಹೂವಿನ ಕರಗ ಮತ್ತು ಹಸಿ ಕರಗ ಎಂಬ ಎರಡು ಬಗೆಗಳನ್ನು ಕಾಣಬಹುದು.

**ಉತ್ಸವದ ವಿವರ:** ಮೊದಲ ದಿನ ಉತ್ಸವವು ಧ್ವಜಾರೋಹಣದಿಂದ ಪ್ರಾರಂಭವಾಗುತ್ತದೆ. ಈ ದಿನ ಕರಗ ಹೊರುವವರನ್ನು ಮತ್ತು ವೀರಕುಮಾರರನ್ನು ಸಕಲ ಮರ್ಯಾದೆಗಳೊಂದಿಗೆ ಧರ್ಮರಾಯನ ದೇಗುಲಕ್ಕೆ ಬರಮಾಡಿಕೊಂಡು ಪೂಜೆ ಪುರಸ್ಕಾರಗಳನ್ನು ಮಾಡುವರು. ಅವರು ಹೊಂದಿರುವ ಆಯುಧವನ್ನು ಪೂಜಿಸಿ ಕಂಕಣ ಕಟ್ಟಿಸಿಕೊಳ್ಳುವರು ಉತ್ಸವದ ಎರಡನೇ ದಿನ ಹಸಿಕರಗ ನೃತ್ಯವು ನಡೆಯುತ್ತದೆ.

ಈ ದಿನದಂದು ಬೆಳಿಗ್ಗೆ ಧರ್ಮರಾಯನ ದೇಗುಲದಲ್ಲಿ ವೀರಕುಮಾರರಿಂದ ಮತ್ತು ಕರಗ ಪೂಜಾರಿಯಿಂದ ಪೂಜಾದಿಗಳು ನಡೆಯುತ್ತವೆ. ಮಧ್ಯಾನ್ನ ಅರಿಸಿನ ಬಣ್ಣದ ಉಡುಗೆ ತೊಟ್ಟು ಇವರೀರ್ವರು ನಿಶ್ಚಿತ ಕೊಳದ ಬಳಿ ಕಲಶಕ್ಕೆ ಪೂಜೆ ಸಲ್ಲಿಸುವರು. ವೀರಕುಮಾರರು ಅಗಲು ಸೇವೆ ನಡೆಸುವರು. ಹೀಗೆ ಪೂಜಿಸಿದ ಹಸಿಕರಗವನ್ನು ನಿಂಬೆಹಣ್ಣು, ಅಕ್ಕಿ ಹಾಗೂ ದಕ್ಷಿಣೆಯನ್ನೊಳಗೊಂಡ ತಟ್ಟೆಯಲ್ಲಿಟ್ಟು ಪೂಜಾರಿ ಮತ್ತಿಬ್ಬರು ಅದನ್ನು ಮೆರವಣಿಗೆಯಲ್ಲಿ ದೇಗುಲಕ್ಕೆ ಕರೆತರುವರು ದೇವಾಲಯದಲ್ಲಿ ಅದನ್ನೆ ಪ್ರತಿಷ್ಠಾಪಿಸಿ ಪೂಜಿಸುವರು.

ಮೂರನೆ ದಿನ ದೀಪೋತ್ಸವ. ವಹ್ನಿಮತಸ್ಥರಿಗೆ ಇದೊಂದು ದೊಡ್ಡ ಹಬ್ಬ. “ಇದನ್ನು ಪೊಂಗಲ್ ಉತ್ಸವವೆಂದು ಕರೆಯುವರು”[7] ವಹ್ನಿಮತಸ್ಥ ಹೆಂಗಸರಿಗೆ ಈ ದಿನ ಪ್ರಾಶಸ್ತ್ಯವಿರುತ್ತದೆ. ಅಂದು ದೇವಾಲಯದಲ್ಲಿ ಪೊಂಗಲ್‌ನ ಅರ್ಧಭಾಗ ವೀರಕುಮಾರರಿಗೆ ಉಣಬಡಿಸಿ ಉಳಿದರ್ಧವನ್ನು ಮನೆಗಳಿಗೆ ಕೊಂಡೊಯ್ಯುವರು. ಅಲ್ಲದೇ ಆ ದಿನ ದೀಪೋತ್ಸವವನ್ನು ನಡೆಸುವರು.

ನಾಲ್ಕನೇ ದಿನ ಕಲ್ಯಾಣೋತ್ಸವವು ನಡೆಯುತ್ತದೆ. ರಾತ್ರಿ ವೈಭವದಿಂದ ದ್ರೌಪಧಿ ಧರ್ಮರಾಯರ ಕಲ್ಯಾಣೋತ್ಸವವು ನಡೆಯುತ್ತದೆ. ಈ ದಿನ ಹರಕೆ ಹೊತ್ತ ಕುಲದವರನ್ನು ಮಂಗಳವಾದ್ಯಗಳೊಂದಿಗೆ ದೇಗುಲಕ್ಕೆ ಕರೆತರುವರು.

ಐದನೇ ದಿನವೇ ಉತ್ಸವದ ಮುಖ್ಯಭಾಗವಾದ ಕರಗ ನೃತ್ಯ (ಹೂವಿನ ಕರಗ). ಈ ದಿನದಂದು ಮೊದಲು ಕಲಶ ಪೂಜಾದಿಗಳು, ನಂತರ ವೀರಕುಮಾರರು ಮತ್ತು ಕರಗ ಪೂಜಾರಿಯು ದೇಗುಲದ ಮುಂದೆ ಅಗ್ನಿಕುಂಡವನ್ನು ಸಿದ್ಧಪಡಿಸುವರು. ಪುನಃ ರಾತ್ರಿ ಕರಗ ಪೂಜಾರಿಯು ಮತ್ತು ವೀರಕುಮಾರರು ನೀರಿನಲ್ಲಿ ಮಿಂದು ದೇಗುಲಕ್ಕೆ ಬರುವರು. ಪೂಜೆಗೊಂಡ ಕಲಶವನ್ನು ಸಣ್ಣ ಕುಂಭ ಒಂದರಲ್ಲಿಟ್ಟು ಅದನ್ನು ಬಿದಿರಿನ ಕವಚದಿಂದ ಗೋಪುರದೋಪಾದಿಯಲ್ಲಿ ಮುಚ್ಚಿ ಮಲ್ಲಿಗೆ ಮೊಗ್ಗುಗಳಿಂದ ಅಲಂಕರಿಸುವರು. ಕರಗ ಪೂಜಾರಿಗೆ ವಪನ (ಚಾರ) ಸಂಸ್ಕಾರಮಾಡಿಸಿ ಅರಿಸಿನ ಬಣ್ಣದ ವಸ್ತ್ರಗಳನ್ನು ತೊಡಿಸುವರು. ಬಳೆ, ಜಡೆ, ಕುಚ್ಚು ಮೊದಲಾದವುಗಳಿಂದ ಅಲಂಕರಿಸುವರು. ಅನಂತರ ವೀರಕುಮಾರರಿಂದ ಅಲಗು ಸೇವೆ ನಡೆಯುತ್ತದೆ. ಪೂಜೆಗೊಂಡ ಹಾಗೂ ಅಲಂಕೃತಗೊಂಡ ಕರಗವನ್ನು ತಲೆಯ ಮೇಲಿಟ್ಟುಕೊಂಡು ಒಂದು ಕೈಯಲ್ಲಿ ಬೆಳ್ಳಿ ಬೆತ್ತ ಮತ್ತೊಂದು ಕೈಯಲ್ಲಿ ಕಠಾರಿ ಹಿಡಿದು ಆರತಿಗೊಂಡು ದೇಗುಲದಿಂದ ಕರಗ ಪ್ರದರ್ಶಿಸಲು ಹೊರಬರುವನು.

ಈತನ ಹಿಂದೆ ಕತ್ತಿಹಿಡಿದ ವೀರಕುಮಾರರು ನಡೆದು ಬರುವರು. ಕರಗಕ್ಕೆ ಊರಿನ ಬೀದಿ ಬೀದಿಯಲ್ಲೂ ಪ್ರತಿ ಮನೆಯಲ್ಲಿಯೂ ಪೂಜೆ ನಡೆಯುತ್ತದೆ. ಕರಗವನ್ನು ತಲೆಯ ಮೇಲೆ ಹೊತ್ತು ಕೈಗಳನ್ನು ಇಳಿಬಿಟ್ಟು, ತಮಟೆ, ಡೋಲು,

ನಾದಸ್ವರಗಳ ಗತ್ತು ಮತ್ತು ರಾಗ ತಾಳಗಳಿಗೆ ಅನುಗುಣವಾಗಿ ಕರಗ ಪೂಜಾರಿಯು ವಿವಿಧ ಆಕರ್ಷಕ ಭಂಗಿಗಳಲ್ಲಿ ಕುಣಿಯುತ್ತಾನೆ. ಇದೊಂದು ಗಂಬೀರ ನೃತ್ಯ ಹಲವು ಗಂಟೆಗಳ ಕಾಲ ದಣಿವಿಲ್ಲದೆ ಕುಣಿಯುವನು. ಕೆಲವೆಡೆಗಳಲ್ಲಿ ಕರಗ ಪೂಜಾರಿಯನ್ನು ಆವೇಶಗೊಳಿಸಲು ಹಾಡುಗಳನ್ನು ಹಾಡುವರು. ಸಾಮಾನ್ಯವಾಗಿ ಈ ನೃತ್ಯವು ಹುಣ್ಣಿಮೆ ದಿನದಂದು ನಡೆಯುತ್ತದೆ.

ಉತ್ಸವದ ಆರನೇ ದಿನ 'ಪುರಾಣ ಪಠಣ'ದ ಅಂಗವಾಗಿ ಮಹಾಭಾರತ ವಾಚನ ನಡೆಯುತ್ತದೆ. ಮತ್ತು 'ಪೋತಾರಾಜ' ಎಂಬುವನ ಹೆಸರಿನಲ್ಲಿ ಮೇಕೆಯ ಬಲಿ ಕಾರ್ಯಕ್ರಮ ನಡೆಯುತ್ತದೆ.

ಏಳನೇ ದಿನ ಉತ್ಸವದ ಕೊನೆಯದಿನ ಆ ದಿನವೇ ವಸಂತೋತ್ಸವವನ್ನು ಆಚರಿಸುವರು. ಕರಗವನ್ನು ಕೋಳದಲ್ಲಿ ವಿಸರ್ಜಿಸುವರು. ನಂತರ ದೇಗುಲದಲ್ಲಿ ವೀರಕುಮಾರರು ನೆತ್ತಿಯ ಮೇಲೆ ವಸಂತದ ನೀರಿರುವ ತಪ್ಪಲೆಗಳನ್ನು ಪೇರಿಸಿಕೊಂಡು ಕುಣಿಯುವರು. ಹೀಗೆ ಕುಣಿಯುವಾಗ ವಸಂತದ ನೀರು ಸುತ್ತಲು ಚೆಲ್ಲಾಡುವುದು. ವಸಂತೋತ್ಸವದೊಂದಿಗೆ ಕರಗ ಮಹೋತ್ಸವ ಮುಕ್ತಾಯವಾಗುತ್ತದೆ.

## 9. ಕಾವಡಿ

ಕಾವಡಿ ಎಂದರೆ ಹೆಗಲ ಮೇಲೆ ಎರಡೂ ಕಡೆ ಹೊತ್ತು ತರುವ ಬಿದಿರಿನ ದಟ್ಟಿ ಅಡ್ಡೆ ಅಥವಾ ತೂಗುಯ್ಯಾಲೆಯಂತಹ ಒಂದು ಸಾಧನ.

"ಕಾವಡಿ ಹೊರುವವರನ್ನು ಕಬಿಕಾರ ಎಂದು ಕರೆಯುತ್ತಾರೆ."[8] ತಮಿಳು ನಾಡಿನಲ್ಲಿ ಮುರುಗ (ಸುಬ್ರಮಣ್ಯ) ದೇವರಿಗಾಗಿ ಮಾಡಲಾಗುವ ಒಂದು ಹರಕೆಯ ಆಟವೇ ಕಾವಡಿ. ಪ್ರಾಚೀನ ಕಾಲದಲ್ಲಿ ಕಾವಡಿ ಸರಕು ಸಾಗಾಣಿಕಾ ಮಾಧ್ಯಮವಾಗಿತ್ತು.

"ಕಾವಡಿ ತಯಾರಿಸಲು ಮುಖ್ಯವಾಗಿ ಬಿದಿರಿನ ದಬ್ಬೆ, ನೂಲುಹಗ್ಗ, ನೂಲು ಹಗ್ಗದಿಂದ ಹೆಣೆದ ತಟ್ಟೆ, ಗಂಟೆ ಇಷ್ಟು ಪರಿಕರಗಳು ಬೇಕಾಗುತ್ತದೆ". ಇವು ಸುಬ್ರಮಣ್ಯ ಸ್ವಾಮಿಯ ಹರಕೆ ಸೇವೆಗಳಲ್ಲಿ ಮಹತ್ವವನ್ನು ಪಡೆದಿದ್ದು, ವಿಶೇಷ ಅರ್ಥವನ್ನೂ ಪಡೆದಿವೆ. ಅನೇಕ ಭಕ್ತರು ಕಾವಡಿ ಹೊರುವ ಹರಕೆಯನ್ನು ನೆರವೇರಿಸುತ್ತಾರೆ. ಇದಕ್ಕೆ ತಾಲೂಕು ಹೊರತಾಗಿಲ್ಲ. ಶ್ರಾವಣಮಾಸದಲ್ಲಿ ಹಲವು ಹಳ್ಳಿಗಳಲ್ಲಿ, ಕಾವಡಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಪೆತ್ತಂಡ್ಲಹಳ್ಳಿ, ದಾಸಾರ್ಲಹಳ್ಳಿ, ಚೀಕೂರು, ಬೈರಕೂರು, ಮುಳಬಾಗಿಲು, ಕುರುಬರಹಳ್ಳಿ, ವಡ್ಡಹಳ್ಳಿ, ಕಾಡೇನಹಳ್ಳಿ, ಪೆದ್ದೂರು ಇನ್ನು ಹಲವು ಗ್ರಾಮಗಳಲ್ಲಿ ಕಂಡುಬರುತ್ತದೆ.

**ಕಾವಡಿ ಸೇವೆಗಳನ್ನು ಹಲವು ವಿಧಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ:**

1. "**ಪದಾರ್ಥರೂಪದ ಸೇವಾ ಕಾವಡಿ:** ಪಾಲ್ ಕಾವಡಿ (ಹಾಲಿನ ಕಾವಡಿ ಸೇವೆ). ಪನ್ನೀರು ಕಾವಡಿ

ಸೇವೆ, ಪುಷ್ಪಕಾವಡಿ, ಚಂದನ ಅಥವಾ ಶ್ರೀಗಂಧ ಕಾವಡಿ ಸೇವೆ, ಎಳನೀರು ಕಾವಡಿ ಸೇವೆ, ಫಲಹಾರ ಕಾವಡಿ ಸೇವೆ, ಅನ್ನದಾನ ಸೇವೆ, ಪ್ರಾಣಿಗಳ ಅರ್ಪಣೆ, ಸಕ್ಕರೆ ಕಾವಡಿ ಸೇವೆ, ಜನ್ಮ ಕಾವಡಿ ಸೇವೆ.

2. **ನೃತ್ಯ ರೂಪದ ಕಾವಡಿ:** ನವಿಲು ಕಾವಡಿ, ಕೋಳಿ (ಹುಂಜ) ಕಾವಡಿ ಸೇವೆಗಳು, ಹಂಸ ಕಾವಡಿ ಸೇವೆಗಳು, ಸರ್ಪಕಾವಡಿ ಸೇವೆಗಳು.
3. **ಸ್ವಹಿಂಸಾ ರೂಪದ ಸೇವಾ ಕಾವಡಿ:** ವೇಲ್ ಕಾವಡಿ ಸೇವೆ, ತೇರು ಕಾವಡಿ.
4. **ಪವಾಡ ಸದೃಶ ಸೇವಾ ಕಾವಡಿ:** ನಿಂಬೆಹಣ್ಣುಗಳನ್ನು ಅಂಗಾಂಗಳಿಗೆ ಹೊಲಿದುಕೊಳ್ಳುವ ಸೇವೆ, ಬೆನ್ನು ಕೊಕ್ಕೆಗಳಿಂದ ಕಣದ ಗುಂಡನ್ನು ಎಳೆಯುವ ಸೇವೆ, ಬಂಡಿಯನ್ನು ಎಳೆಯುವ ಸೇವೆ, ತೂಗೂಯ್ಯಾಲೆ ಪೂಜಾ ಸೇವೆ, ಅರಿಶಿನ ಕುಟ್ಟುವ ಸೇವೆ."[9]

ಹರಕೆಯು ಹೀಡೆರಿದ ನಂತರ ಮಗು ಜನಿಸಿದರೆ ಸ್ವಾಮಿಯ ಹೆಸರನ್ನು ಇಡುತ್ತಾರೆ. ಸುಬ್ರಮಣಿ, ಮಣಿ, ಸುಬನ್ನ, ಸುಬ್ಬೇಗೌಡ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಕಾವಡಿ ದಿನ ಸ್ವಾಮಿಗೆ ವಿಶೇಷವಾಗಿ ಅಲಂಕರಿಸಿರುತ್ತಾರೆ. ವಿಶೇಷ ಅಡುಗೆಗಳನ್ನು ಮಾಡಿ, ಬಂಧುಬಳಗಕ್ಕೆ ಆಹ್ವಾನ ನೀಡುತ್ತಾರೆ. ಸುಮಾರು ಒಂದೊಂದು ಊರಿನಲ್ಲಿ 15 ರಿಂದ 30 ಜನ ಕಾವಡಿ ಹೊರುವವರು ಸಿಗುತ್ತಾರೆ. ಇದರಲ್ಲಿ ಗಂಡು, ಹೆಣ್ಣು, ವಯಸ್ಸಾಗಿರುವವರು ಎಲ್ಲರು ಸೇರುತ್ತಾರೆ.

ಕಾವಡಿ ಮೆರವಣಿಗೆ ಆದ ಅನಂತರ ಸಾಯಂಕಾಲ ಊರ ಗ್ರಾಮದೇವತೆಗೆ ಪೂಜೆ ಸಲ್ಲಿಸಿ, ಅವರವರ ಅನುಕೂಲಕ್ಕೆ ತಕ್ಕಂತೆ ಕೆಲವರು ತಿರುತ್ತಣಿ, ಕೆಲವರು ನಂಗಲಿ, ಮುಳಬಾಗಿಲು ಇತ್ಯಾದಿ ಕ್ಷೇತ್ರಗಳಿಗೆ ಹೋಗಿ ಕಾವಡಿ ಸಮರ್ಪಿಸಿಕೊಂಡು (ಸಲ್ಲಿಸಿಕೊಂಡು) ಬರುವ ಪದ್ಧತಿ ಪ್ರಸ್ತುತವು ಚಾಲ್ತಿಯಲ್ಲಿದೆ.

## 10. ನಾಟಕಗಳು

ಒಂದು ಕಾಲಕ್ಕೆ ಈ ತಾಲೂಕಿನ ಗ್ರಾಮೀಣ ಭಾಗಗಳ ಮೇಲೆ ಜನಪದ ರಂಗಭೂಮಿ ಗಾಢವಾದ ಪರಿಣಾಮ ಬೀರಿತ್ತು. ಬೇಸಿಗೆ ಕಾಲ ಬಂತೆಂದರೆ ತಾಲೂಕಿನ ಹಲವು ಗ್ರಾಮಗಳು ರಂಗಭೂಮಿಯಾಗಿ ಪರಿವರ್ತನೆಗೊಳ್ಳುತ್ತಿದ್ದವು. ನಿಜಕ್ಕೂ ಇದು ಆಶ್ಚರ್ಯವನ್ನುಂಟು ಮಾಡುತ್ತಿತ್ತು. ತಮ್ಮದೇ ಹಣ, ತಮ್ಮದೇ ಅಭಿನಯ, ತಮ್ಮದೇ ವೇದಿಕೆಗಳ ಮೂಲಕ ನಾಟಕವನ್ನಾಡಿ ಕೆಲವು ದಿನಗಳ ಕಾಲವಾದರು. ರಾಮ–ರಾವಣ, ಭೀಮ–ದುರ್ಯೋಧನ ಮೊದಲಾದವರ ಗುಂಗುವಿನಲ್ಲಿರುತ್ತಿದ್ದರು. ಈ ರೀತಿ ವಾತಾವರಣ ವೃತ್ತಿರಂಗ ಭೂಮಿಯಲ್ಲಾಗಲಿ, ಹವ್ಯಾಸಿ ರಂಗ ಭೂಮಿಯಲ್ಲಾಗಲಿ ಕಂಡು ಬರುವುದಿಲ್ಲ. ಬೇಸಿಗೆಯಲ್ಲಿ ಕೃಷಿ ಚಟುವಟಿಕೆಗಳು ಸ್ಥಗಿತಗೊಳ್ಳುವುದರಿಂದಾಗಿ ತಮ್ಮ ಬಿಡುವಿನ ವೇಳೆಯಲ್ಲಿ ನಾಟಕದ ಕಲಿಕೆಯಲ್ಲಿ ತೊಡಗುತ್ತಾರೆ.

"ಸಾರ್ವಜನಿಕವಾಗಿ ಪ್ರದರ್ಶನ ಮಾಡುವುದಕ್ಕೆ ಮೊದಲು 2 ರಿಂದ 3

ತಿಂಗಳುಗಳ ಕಾಲ ಇವರು ನಿಗದಿತ ಸಮಯದಲ್ಲಿ ಅಭ್ಯಾಸ ಮಾಡುತ್ತಾರೆ. ಇವರಿಗೆ ತರಬೇತಿ ಮಾಡಿಸಲು ಹಾರ್ಮೋನಿಯಂ ಮಾಸ್ಟರ್ ಇರುತ್ತಾರೆ. ಇವರಿಗೆ ಇಂತಿಷ್ಟು ಸಂಭಾವನೆ ಎಂದು ನಿಗದಿಪಡಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಇವರು ಆರಿಸಿಕೊಳ್ಳುವ ನಾಟಕಗಳು ರಾಮಾಯಣ, ಮಹಾಭಾರತ, ಪೌರಾಣಿಕ ಪ್ರಸಂಗಗಳು, ಇತ್ತೀಚಿನ ಸಾಮಾಜಿಕ ನಾಟಕಗಳೆಂದರೆ ಹಲವರು ಮೂಗು ಮುರಿಯುತ್ತಾರೆ.''10

ತಾಲೂಕಿನಲ್ಲಿ ಈಗಲೂ ಈ ಕಲೆ ಪ್ರಚಲಿತವಿರುವುದು ಕಂಡು ಬರುತ್ತದೆ. ತಾಲೂಕಿನ ಬಂಗವಾದಿ ಮತ್ತು ತಮ್ಮಿರೆಡ್ಡಿಹಳ್ಳಿಯಲ್ಲಿ ನಾಟಕ ತರಬೇತಿದಾರರು, ತತ್ವಪದಕಾರರು, ಭಜನೆ ಮಂಡಳಿಯವರನ್ನು ಕಾಣಬಹುದು. ಹಲವು ವಿಶೇಷ ಸಂದರ್ಭಗಳಾದ ದಸರಾ, ಜಾತ್ರೆ, ದ್ಯಾವರ ಸಂದರ್ಭ ಮತ್ತು ಯಾರಾದರು ಸತ್ತಾಗ ತಿಥಿಯ ದಿನ ನಾಟಕ ಆಡಿಸುವ ವಾಡಿಕೆ ತಾಲೂಕಿನಾದ್ಯಂತ ಚಾಲ್ತಿ ಇದೆ. ಇಷ್ಟೇ ಅಲ್ಲದೇ, ಪೀಳಂಗಾವಿ ಕಲೆ, ತೊಗಲುಗೊಂಬೆ, ತಂಬೂರಿ, ತತ್ವಪದಕಾರರು, ದಾಸರು, ಹಾವಾಡಿಗರು ಇತ್ಯಾದಿ ಕಲೆಗಳನ್ನು ತಾಲೂಕಿನಾದ್ಯಂತ ಕಾಣಬಹುದಾಗಿದೆ.

**ಕೊನೆ ಟಿಪ್ಪಣಿಗಳು:**

1. ನಲ್ಲೂರ್ ಪ್ರಸಾದ್. (2011). ಜಾನಪದ ಸುಗ್ಗಿ. ಪು.ಸಂ. 24
2. ವಕ್ತೃ: ಸುಬ್ರಮಣಿ. (10–10–2015). ಕಲಾವಿದರು. ಪೆತ್ತಾಂಡ್ಲಹಳ್ಳಿ. ವಯಸ್ಸು: 35
3. ಅರವಿಂದ ಮಾಲಗತ್ತಿ (ಪ್ರ.ಸಂ.). (2006). ವಿಷಯ ವಿಶ್ವಕೋಶ. ಪು.ಸಂ. 394
4. ನಲ್ಲೂರ್ ಪ್ರಸಾದ್. (2011). ಜಾನಪದ ಸುಗ್ಗಿ. ಪು.ಸಂ. 74
5. ವಕ್ತೃ: ದಾಸಪ್ಪ. (12–03–2016). ಕೊಣನಗುಂಟೆ. ವಯಸ್ಸು: 66
6. ವಕ್ತೃ: ದಾಸಪ್ಪ. (03–04–2017) ಬಂಗವಾದಿ. ಕಲಾವಿದ. ವಯಸ್ಸು: 47
7. ನಲ್ಲೂರ್ ಪ್ರಸಾದ್. (2011). ಜಾನಪದ ಸುಗ್ಗಿ. ಪು.ಸಂ. 77
8. ಅರವಿಂದ ಮಾಲಗತ್ತಿ (ಪ್ರ.ಸಂ.). (2006). ವಿಷಯ ವಿಶ್ವಕೋಶ. ಪು.ಸಂ. 286
9. ಚಂದ್ರಬಾಬು ವೈ. (2010). ಜನಪದ ಕಾವಡಿ ಹಬ್ಬಗಳು ಸಾಂಸ್ಕೃತಿಕ ಅಧ್ಯಯನ. ಅಂಜಲಿ ಪ್ರಕಾಶನ. ಮುಳಬಾಗಿಲು. ಪು.ಸಂ. 111
10. ವಕ್ತೃ: ವೀರಭದ್ರಪ್ಪ. (20–04–2016). ಉಪನ್ಯಾಸಕರು/ ನಾಟಕ ಕಲಾವಿದರನ್ನು ಸಂದರ್ಶಿಸಿದಾಗ ಪಡೆದ ಮಾಹಿತಿ.

## ಪರಾಮರ್ಶನ ಗ್ರಂಥಗಳು:


1. ಕಲುಬುರ್ಗಿ ಎಂ. ಎಂ. (1992). ಕನ್ನಡ ಸಂಶೋಧನಾ ಶಾಸ್ತ್ರ. ಚೇತನ್ ಬುಕ್ ಹೌಸ್. ಮೈಸೂರು.
2. ಕೃಷ್ಣಪ್ಪ. (2007). ಕೋಗಿಲಹಳ್ಳಿ ಕೋಲಾರ ವೈಭವ (ಕವನ ಸಂಕಲನ). ಕಿರಣ ಕಿಶೋರ ಪ್ರಕಾಶನ. ಕೆ.ಜಿ.ಎಫ್.
3. ಗೋಪಾಲಕೃಷ್ಣ ವಿ. (2012). ಕೋಲಾರ ಜಿಲ್ಲೆ ಸ್ಥಳನಾಮಗಳು. ಅಖಿಲ ಭಾರತ ಮುಂಡಾಲ ಸಮಾಜ ಚಾರಿಟಬಲ್ ಟ್ರಸ್ಟ್. ಬೆಂಗಳೂರು.
4. ಚಂದ್ರಬಾಬು ವೈ. (2010). ಜನಪದ ಕಾವಡಿ ಹಬ್ಬಗಳು ಸಾಂಸ್ಕೃತಿಕ ಅಧ್ಯಯನ. ಅಂಜಲಿ ಪ್ರಕಾಶನ. ಮುಳಬಾಗಿಲು.
5. ನರಸಿಂಹನ್ ಕೆ. ಆರ್. (2012). ಮುಳಬಾಗಿಲು ಇತಿಹಾಸ ದರ್ಶನ ಪ್ರಿಂಟರ್ಸ್. ಬೆಂಗಳೂರು.
6. ಶಿವಪ್ಪ ಜಿ. (2012). ಮುಳಬಾಗಿಲು ತಾಲ್ಲೂಕಿನ ಚರಿತ್ರೆ ಮತ್ತು ಸಂಸ್ಕೃತಿ. ಎಸ್ಅಂಡ್ಎಸ್ ಪಬ್ಲಿಕೇಶನ್. ಬೆಂಗಳೂರು.
7. ಚಿತ್ತರಂಜನ್ ಎಚ್. (2005). ಕೋಲಾರ ಜಿಲ್ಲೆ ಗ್ಯಾಸೆಟಿಯರ್. ಪರಿಶ್ರೀ ಪ್ರಿಂಟರ್ಸ್. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.